# ನವಿಲುಗನ್ನಡಿ

ಸೆಪ್ಟೆಂಬರ್ ಸಂಚಿಕೆಯ ಮುಖಪುಟ ವರ್ಣರಂಜಿತ ಮತ್ತು ಆಕರ್ಷಕವಾಗಿದೆ. 'ಇದು ಬಿಚ್ಚುಗತ್ತಿ ಭಂಟನ ಕತೆಯಲ್ಲ' ಲೇಖನ (ಮೂಲ: ಸಾರಾ ಕಮಿನ್ಸ್ಕಿ, ಕನ್ನಡಕ್ಕೆ: ಹೇಮಾ ಎಸ್.) ಮನಮುಟ್ಟಿತು. ಬರಹಗಳ ವೈವಿಧ್ಯ ಈ ಸಂಚಿಕೆಯ ವೈಶಿಷ್ಟ್ಯವಾಗಿದೆ.

**ಸುರೇಂದ್ರಪ್ರಸಾದ್ ಬಿ.ಕೆ., ಹುಬ್ಬಳ್ಳಿ**

'ನನ್ನ ಕಥಾ ಪ್ರಸಂಗ' ಹಾಗೂ 'ನವಿಲುಗರಿ' ಅಂಕಣಗಳು ಪ್ರತಿ ತಿಂಗಳೂ 'ಮಯೂರ'ಕ್ಕಾಗಿ ಕಾಯುವಂತೆ ಮಾಡಿವೆ. 'ನನ್ನ ಕಥಾಪ್ರಸಂಗ'ದಲ್ಲಿ ಕನ್ನಡದ ಮೇರು ಕತೆಗಾರರ ಅನುಭವದ ನಿರೂಪಣೆಗಳು ಬರಹಗಾರರಿಗೆ ಹೊಸ ಪಾಠ ಕಲಿಸುತ್ತವೆ.

**ಮುರಲಿ ಕುಂಬ್ಳೆ, ಬೆಂಗಳೂರು**

ಈ ಬಾರಿಯ 'ನನ್ನ ಕಥಾಪ್ರಸಂಗ' (ಎಸ್. ದಿವಾಕರ್)ದಲ್ಲಿ ಸಣ್ಣ ಕತೆಯ ಬಗ್ಗೆ ಮಾರ್ಮಿಕವಾದ ಒಳನೋಟಗಳಿವೆ. ದೀಪ್ತಿ ಭದ್ರಾವತಿ ಅವರ 'ಸ್ಫೋಟ' ಕತೆ ಹೊಸ ಕಥಾಹಂದರದಿಂದ ಗಮನ ಸೆಳೆಯಿತು.


**ಆಕಾಶ ಲೋಖಂಡೆ, ಅಫಜಲಪುರ**

ಕಾಮಕ್ಕೆ ಕಣ್ಣಿಲ್ಲ. ನಾವು ಎಣಿಸಿದಂತೆ ಯಾವುದೂ ಆಗುವುದಿಲ್ಲ ಎನ್ನುವುದಕ್ಕೆ 'ಹಾದರದ ವಾರಸುದಾರ'(ರೇವತಿ) ಕತೆ ಸಾಕ್ಷಿ.

**ಪಿ. ಜಯವಂತ ಪೈ, ಕುಂದಾಪುರ**

ಮಧ್ಯಮ ವರ್ಗದವರ ಮನೆಯ ಕನಸಿನ ಬವಣೆಯನ್ನು ಯಥಾವತ್ತು ದಾಖಲಿಸಿದ ರಹಮತ್ ತರೀಕೆರೆ ಅವರ ಪ್ರಬಂಧ 'ನಾವೂ ಮನೆ ಕಟ್ಟಿದೆವು' ಉತ್ತಮವಾಗಿತ್ತು.

**ನೀಲಮ್ಮ ಕುಮಾರಪ್ಪ, ಲಿಂಗಸೂರು**




'ಕೆಳಗೆ ನೆಲ ಇದೆ' (ತೆಲುಗು ಮೂಲ: ಮಹಮ್ಮದ್ ಖದೀರ್ ಬಾಬು, ಕನ್ನಡಕ್ಕೆ: ಚಿದಾನಂದ ಸಾಲಿ) ನೀಳ್ಗತೆ ಸೊಗಸಾಗಿತ್ತು. ಕತೆಯನ್ನು ಓದಿ ಮುಗಿಸಿದ್ದೇ ಗೊತ್ತಾಗಲಿಲ್ಲ.

**ಅನುಪಮಾ, ಮಾಲೂರು**

ಅರುಣಾ ಕೆ.ಆರ್. ಅವರ 'ಗಾಂಧಿಮೈದಾನ ಮತ್ತು ಟೆಂಟ್ ಸಿನಿಮಾ' ಲಲಿತ ಪ್ರಬಂಧ ವಿಶಿಷ್ಟವಾಗಿತ್ತು; ಬಾಲ್ಯಕ್ಕೆ ನಮ್ಮನ್ನು ಕರೆದೊಯ್ದಿತು.

**ಗುರುಪ್ರಸಾದ್, ಬೆಂಗಳೂರು**

'ಜನಪ್ರಿಯ ಸ್ತ್ರೀ ಪಾತ್ರಧಾರಿ ಡಿ. ಮುರಾರಾಚಾರ್' ಲೇಖನ ಮರೆತು ಹೋಗಿದ್ದ ರಂಗನಟ ಮುರಾರಾಚಾರ್ ಅವರನ್ನು ನೆನಪಿಸಿತು.

**ಶ್ರುತಿ, ದೊಡ್ಡಬಳ್ಳಾಪುರ**

'ಮೂರನೆಯ ಕಣ್ಣು' (ಬನವಾಸಿ ವೇಂಕಟೇಶ ದೀಕ್ಷಿತ್) ಕತೆ ಸರಳವಾಗಿ, ಸೊಗಸಾಗಿದೆ. 'ಘಾತ' (ಪ್ರಕಾಶ ನಾಯಕ) ಕತೆ ಕುತೂಹಲ ಹುಟ್ಟಿಸುತ್ತದೆ.

**ಸುಮತಿ ಗೌಡ, ಮಂಡ್ಯ**